ಕೊಡಿ' ಅಂತ ಹೇಳಿದ್ದೂ ಉಂಟು. ಲೀಸ್ ಅಗ್ರಿಮೆಂಟ್, ಡಿಪಾಸಿಟ್, ಕ್ರೆಡಿಟ್ ಹಿಸ್ಟರಿಗಳ ಜಂಜಾಟವೂ ಇರಲಿಲ್ಲ. ಎಲ್ಲವೂ ನಗದು ವ್ಯವಹಾರ, ಹಾಗಾಗಿ ಅಕ್ರಮ ವಲಸೆಗಾರರೇ ತುಂಬಿರುತ್ತಿದ್ದರು. 'ಈ ನೆರೆಯಲ್ಲಿ ಕ್ರೈಮ್ ರೇಟ್ ಜಾಸ್ತಿ, ಸಂಸಾರಸ್ಥರು ಬಾಡಿಗೆಗೆ ಬರುವುದಿಲ್ಲ, ಬಂದಷ್ಟು ಬರಲಿ ಎಂದು ನಮಗೆ ಕೊಟ್ಟಿದ್ದಾನೆ' ಎನ್ನುವುದು ಅವರೆಲ್ಲರೂ ಒಪ್ಪಿಕೊಂಡ ತರ್ಕವಾಗಿತ್ತು. ಆದರೆ, ಕೆನಡಾದಿಂದ ಎರಡು ತಿಂಗಳ ಮಾತಿಗೆ ಬಂದಿದ್ದ ಬಂಟಿ ಸಿಂಗ್, 'ನಿಮ್ಮ ಓನರ್ ಈ ಮನೆಯಲ್ಲಿ ಡ್ರಗ್ಸ್ ಬಚ್ಚಿಟ್ಟಿದ್ದಾನೆ, ನೀವು ಅದಕ್ಕೆ ಬೆರ್ಚಪ್ಪಗಳು' ಎಂದು ಪಿಸುಗುಟ್ಟಿದಾಗ, ಶಮಿ ಮತ್ತವನ ಸಂಗಾತಿಗಳೆಲ್ಲ ನಿಧಿ ಅರಸುವವರ ಹಾಗೆ ಇಡೀ ಮನೆಯನ್ನು ಜಾಲಾಡಿ ಏನೂ ಸಿಗದೇ, "ಶ್ರೀನಿವಾಸ್ ರಾವ್ ಚಾಲೂ ಮನುಷ್ಯ, ನಮ್ಮ ಕೈಗೆ ಸಿಗುವ ಹಾಗೆ ಇಡಲಿಕ್ಕಿಲ್ಲ" ಎಂದು ಸುಮ್ಮನಾಗಿದ್ದರು. ಅದೇ ಸಾಲಿನಲ್ಲಿ ಬಹಳಷ್ಟು ಮನೆಗಳು ಖಾಲಿ ಬಿದ್ದಿದ್ದವು. ಆ ಮನೆಗಳು ಒಂದೇ ಬ್ಯಾಂಕ್ ವಶದಲ್ಲಿದ್ದವು ಅಥವಾ ಇನ್ವೆಸ್ಟ್‌ಮೆಂಟ್ ಮನೆಗಳಾಗಿದ್ದವು, ಶಮಿಯ ಸಂಗಡಿಗರಂತೆಯೇ ಅವೂ ಮಾರ್ಕೆಟ್ ಸುಧಾರಿಸಬಹುದೆಂದು ಕಾಯುತ್ತಿದ್ದವು. ಕಡಿಮೆದರದ ಕೂಲಿಗಳನ್ನರಸುತ್ತ ಜಗತ್ತು ಸುತ್ತುವ ಮಾರ್ಕೆಟ್ ಅವರೆಲ್ಲರಿಗೂ ಸಮಾನ ವೈರಿಯಾಗಿತ್ತು. ಶ್ರೀನಿವಾಸ್ ರಾವ್‌ನ ಉದಾರತೆಯಿಂದಾಗಿ ಭಣಗೊಡುವ ಮನೆಗಳ ಸಾಲಿನಲ್ಲಿದ್ದರೂ ಆ ಛತ್ರ ಮಾತ್ರ ಗಿಜಿಗುಡುತ್ತಿತ್ತು.

ಆ ಛತ್ರದಲ್ಲಿ ಜನರಿಗಿಂತ ಹೆಚ್ಚು ಸಮಸ್ಯೆಗಳಿದ್ದವು. ಶಮಿಯನ್ನು ಬಿಟ್ಟು ಅಲ್ಲಿದ್ದ ಯಾರ ಹತ್ತಿರವೂ ವಾಹನಗಳಿರಲಿಲ್ಲ ಎನ್ನುವುದು ಅವುಗಳಲ್ಲಿ ಮೊದಲನೆಯದು. ಬೆನ್ನ ಹಿಂದೆಯೇ ರೇಲ್ವೆ ಹಳಿಯಿದ್ದು, ಹದಿನೈದು–ಇಪ್ಪತ್ತು ನಿಮಿಷಗಳಿಗೊಮ್ಮೆ ಟ್ರೇನ್ ಓಡುತ್ತಿದ್ದರೂ ಹತ್ತಿರದ ಮಿಲ್ ಬ್ರೂ ಸ್ಟೇಷನ್‌ಗೆ ಎರಡು ಮೈಲಿ ನಡೆಯಬೇಕಿತ್ತು! ಶಮಿಯ ಹತ್ತಿರ ಸ್ಟಾರ್ಟ್ ಮಾಡುವಾಗಲೊಮ್ಮೆ ತನ್ನ ಹಳೇಪುರಾಣ ಹೇಳುವ, ನಂತರ ಇಲ್ಲದ ಮನಸ್ಸಿನಿಂದ ಏದುಬ್ಬಸ ಬಿಡುತ್ತ ಓಡುವ, ಎಪ್ಪತ್ತರ ಮಾಡಲ್ಲಿನ ಫೋರ್ಡ್ ಗ್ರಾನಡ ಕಾರಿತ್ತು. ದಿನಸಿ ತರಲು, ಕೆಲವೊಮ್ಮೆ ಸಿಗರೇಟು ಖಾಲಿಯಾದರೂ ಅದೇ ಕಾರನ್ನು ಓಡಿಸಬೇಕಿತ್ತು. ಓಡುತ್ತಿರುವ ಕಾರಿನಲ್ಲಿಯೂ ಸುಮ್ಮನೆ ಕುಳಿತುಕೊಳ್ಳುವ ಜಾಯಮಾನದ ಜನವೂ ಅಲ್ಲ. ಕಾರನ್ನು ಹೇಗೆ ರಿಪೇರಿ ಮಾಡಿಸಬಹುದು, ಪುಗಸಟ್ಟೆ ಕೊಟ್ಟರೂ ಹಳೆ ಕಾರನ್ನು ಯಾಕೆ ತೆಗೆದುಕೊಳ್ಳಬಾರದು ಎನ್ನುವ ಕುರಿತೇ ಚರ್ಚೆ. ಹಲವು ವರ್ಷಗಳಿಂದ ಜೊತೆಗಿದ್ದ ಆ ಕಾರನ್ನು ಯಾರಾದರೂ ಟೀಕಿಸಿದರೆ ಶಮಿಗೆ ಸಿಟ್ಟು ಬರುತ್ತಿತ್ತು. ಛತ್ರದಲ್ಲಿ ಸದಾ ಗದ್ದಲ, ರಾತ್ರಿ ಒಂದರವರೆಗೂ ಸಿನಿಮಾ, ಕ್ರಿಕೆಟ್ ಅಥವಾ ರಾಜಕೀಯ. ಚಳಿಗಾಲದ ಅಸಹನೀಯ ಚಳಿಯಲ್ಲಿ, ಒಂದೇ ಹಾಸಿಗೆಯಲ್ಲಿ ನಾಲ್ಕು ಜನ ಮಲಗಿದ್ದೂ ಉಂಟು. ಒಬ್ಬೊಬ್ಬರ ತೀರಾ ಖಾಸಗಿ ಗಬ್ಬು ವಾಸನೆಗಳು! ಆ ಅಸಹನೀಯ ವಾಸ್ತವವನ್ನು ಮರೆಯಲೆಂದೇ ಶಮಿ ವೆಸ್ಟ್ ಎಂಡ್‌ನ ಉದ್ದಕ್ಕೂ ಒಬ್ಬನೇ ವಾಕಿಂಗ್ ಹೋಗುತ್ತಿದ್ದ. 'ರಾತ್ರಿ ಹತ್ತು ಗಂಟೆಯಮೇಲೆ ಹಾಗೆ ತಿರುಗಾಡುವುದು ಸರಿಯಲ್ಲ, ಮಗ್ಗಿಂಗ್ ಜಾಸ್ತಿ' ಎಂದು ಆ ಛತ್ರದಲ್ಲಿ ಆರು ತಿಂಗಳಿಂದ ಬೇರೂರಿದ್ದ ರಂಗಸ್ವಾಮಿ ಹೆದರಿಸಿದ್ದ. ಶಮಿಯಲ್ಲಿ ಕಸಿದುಕೊಳ್ಳುವಂತದ್ದು ಏನೂ ಇರಲಿಲ್ಲ, ಆದರೆ ಏನೂ ಸಿಗಲಿಲ್ಲವೆಂದು ನಿರಾಶೆಯಾಗಿ ಗುಂಡುಹೊಡೆದರೆ? ಗನ್ ಇರದಿದ್ದರೂ ಚೂರಿ ಹಾಕಿದರೆ? ಈ ಹೆದರಿಕೆಯನ್ನೇ ನಂಚುತ್ತ ದಿನಕಳೆಯುತ್ತಿದ್ದಾಗಲೇ, ಭಾರತ್ ಬಜಾರಿನಲ್ಲಿ ಅವನೊಟ್ಟಿಗೆ ಸಂಜೆ ಗಂಟೆಕೂಲಿ ಮಾಡುತ್ತಿದ್ದ ಏಕಮಾತ್ರ ಮೆಕ್ಸಿಕನ್ ಕಾರ್ಲಿತೋನ ಪರಿಚಯವಾಗಿತ್ತು.